# ಪೀಠಿಕೆ

## I. ಬೈಬಲ್ ಚರಿತ್ರೆಯನ್ನು ಯಾಕೆ ಅಧ್ಯಯನ ಮಾಡಬೇಕು?

ಪ್ರಶ್ನೆಯು ಯೋಗ್ಯವಾದದ್ದಾಗಿದೆ. ಸಭಾಸೇವಕನು ಬೈಬಲನ್ನು ಅಧ್ಯಯನ ಮಾಡಲು *ನಿರೀಕ್ಷಿಸಲ್ಪಟ್ಟಿದ್ದಾನೆ.* ಅದನ್ನು ಅವನು ತಾನೇ ತಿಳಿದುಕೊಳ್ಳುವುದು ಮತ್ತು ಇತರರಿಗೆ ಬೋಧಿಸುವುದು ಅವನ ಕೆಲಸವಾಗಿದೆ. ಎಲ್ಲಾ ಕ್ರೈಸ್ತ ಜನರು ತಮ್ಮ ಪ್ರತ್ಯೇಕವಾದ ಮತ್ತು ವೈಯಕ್ತಿಕ ಭಕ್ತಿವರ್ಧನೆಗಾಗಿ ಸಾಧನವಾಗಿ ಬೈಬಲನ್ನು ಓದ ಬೇಕಾಗಿರುವುದು. ಆದರೆ ಬೈಬಲ್ ಚರಿತ್ರೆಯನ್ನು ಕಾಲೇಜಿನ ಪಠ್ಯದ ಭಾಗವಾಗಿ ಒಂದು ವ್ಯವಸ್ಥಿತ ಕೋರ್ಸ್ ಆಗಿ ಯಾಕೆ ಮಾಡಬೇಕು?

**1. ಯಾಕಂದರೆ ಬೈಬಲು ಬಹಳ ವಿಶಾಲವಾಗಿ ತಿಳಿಯಲ್ಪಟ್ಟಿರುತ್ತದೆ.**-ಕ್ರೈಸ್ತ ರಾಜ್ಯದಲ್ಲಿ ಪ್ರತಿಯೊಂದು ಮನೆಯಲ್ಲಿ ಅದರ ಕಥೆಗಳು ಓದಲ್ಪಡುತ್ತವೆ ಇಲ್ಲವೇ ಪುನಃ ಪುನಃ ಹೇಳಲ್ಪ ಡುತ್ತವೆ. ಸಭೆಯಲ್ಲಿ ಮತ್ತು ವಸತಿ ನಿಲಯದಲ್ಲಿ ಗೌರವವುಳ್ಳ ಸ್ಥಳದಲ್ಲಿ, ಲೆಜಿಸ್ಲೇಟಿವ್ ಸಭಾಂಗಣದಲ್ಲಿ, ಮತ್ತು ನ್ಯಾಯಾಲಯಗಳಲ್ಲಿ ಇದು ಅತಿ *ಶ್ರೇಷ್ಠ* ಸ್ಥಳದಲ್ಲಿ ಇರುತ್ತದೆ. ನಮ್ಮ ಅತೀ ದೊಡ್ಡ ಆಧುನಿಕ ಸಾಹಿತ್ಯಗಳಲ್ಲಿ ಸಮ್ಮಿಶ್ರಗೊಂಡಿದೆ ಮತ್ತು ಮುನ್ನೂರು ಭಾಷೆಗಳಲ್ಲಿ ಮತ್ತು ಉಪಭಾಷೆಗಳಲ್ಲಿ ಅನುವಾದಕೊಂಡಿದೆ.[1] ನೇರವಾಗಿ ಮತ್ತು ಪರೋಕ್ಷವಾಗಿ ಇದು ಜಗತ್ತಿನಲ್ಲಿಯ ಯಾವುದೇ ಇತರ ಪುಸ್ತಕಕ್ಕಿಂತ ಹತ್ತು ಪಟ್ಟು ಹೆಚ್ಚು ಪುಸ್ತಕಗಳನ್ನು ಸೃಷ್ಟಿಸುತ್ತದೆ. *ಅಂಥ* ಪುಸ್ತಕವು, ಅಷ್ಟು ವಿಶಾಲವಾಗಿ ತಿಳಿಯಲ್ಪಟ್ಟಿದೆ, ಮತ್ತು ಅಷ್ಟು ರಚನಾತ್ಮಕವಾದದ್ದಾಗಿದೆ, ಅದು ಮುಕ್ತ ಸಂಸ್ಕೃತಿಯ ಯಾವುದೇ ಯೋಜನೆಯಲ್ಲಿ ಕೂಡಿಸಲ್ಪಡತಕ್ಕದ್ದು.

**2. ಯಾಕಂದರೆ ಅದು ಅಷ್ಟು ಸ್ವಲ್ಪವಾಗಿ ತಿಳಿಯಲ್ಪಟ್ಟಿದೆ.**-ಜನರು ಬೈಬಲನ್ನೇ ಓದುವುದಕ್ಕಿಂತ ಹೆಚ್ಚಾಗಿ ಬೈಬಲಿನ ಬಗ್ಗೆ ಓದುತ್ತಾರೆ. ಅವರು ಅದನ್ನು ಅಧ್ಯಯನ ಮಾಡುವುದಕ್ಕಿಂತ ಹೆಚ್ಚಾಗಿ ಓದುತ್ತಾರೆ. ಅದರ ಬಗ್ಗೆ ಅವರ ಜ್ಞಾನವು ಹುರುಳಿಲ್ಲದ್ದು ಮತ್ತು ಅಪೂರ್ಣ ವಾದದ್ದು ಆಗಿದೆ. ಅವರಿಗೆ ಅದರ ಬಗ್ಗೆ ಸ್ಪಷ್ಟವಾಗಿ *ಸಂಭಂಧಿಸಿದ* ದೃಷ್ಟಿಕೋನ ವಿರುವುದಿಲ್ಲ. ವಿದ್ಯಾರ್ಥಿಯು ಐಗುಪ್ತದ ಮತ್ತು ಪರ್ಸಿಯಾದ, ಗ್ರೀಸಿನ ಮತ್ತು ರೋಮಾದ ಚರಿತ್ರೆಯ ರೂಪರೇಷೆಯನ್ನು ಮಾಡಲು ಕಲಿಯುತ್ತಾನೆ. ಎಷ್ಟು ಜನ ಕಾಲೇಜಿನ ಪದವೀಧಾರರು ಅಬ್ರಹಾಮನ ಇಲ್ಲವೇ ಮೋಶೆಯ ಇಲ್ಲವೇ ದಾವೀದನ ಬುದ್ಧಿವಂತ ವಿವರವನ್ನು ಕೊಡಬಲ್ಲರು, ಇಲ್ಲವೇ ಯೇಸುವಿನ ಇಲ್ಲವೇ ಪೌಲನ ಜೀವದಲ್ಲಿ ಕ್ರಮಪ್ರಕಾರವಾಗಿ ಒಂದು ಡಜನ್ ಸಂಗತಿಗಳನ್ನು ಹೇಳಬಹುದು?

**3. ಯಾಕಂದರೆ ಬೈಬಲಿನ ಯೋಜನೆಯು ಐತಿಹಾಸಿಕವಾಗಿದೆ.**-ಅದು ತರ್ಕಬದ್ಧವಾ ದದ್ದೂ ವೈಜ್ಞಾನಿಕವಾದದ್ದೂ ಆಗಿರುವುದಿಲ್ಲ. ವಿಮೋಚನೆಯು ಅದರ ಪುಟಗಳಲ್ಲಿ ಐತಿಹಾಸಿಕ ವಾಗಿ ಪ್ರಕಟಿಸಲ್ಪಟ್ಟಿದೆ; ಅದು ಐತಿಹಾಸಿಕವಾಗಿ ಅಧ್ಯಯನ ಮಾಡಲ್ಪಡಬೇಕು. ಬೈಬಲಿನ ಒಂದು ವಚನದಿಂದ, ಒಂದು ಘಟನೆಯಿಂದ, ಒಂದು ಪಾತ್ರದಿಂದ ಸಂಶಯವಿಲ್ಲದೇ ಒಬ್ಬನು ಒಳ್ಳೆಯದನ್ನು ಪಡೆದುಕೊಳ್ಳಬಹುದು, ಅದು ಐತಿಹಾಸಿಕ ಹಿನ್ನೆಲೆಯಿಂದ ಬೇರ್ಪಡಿಸಲ್ಪಟ್ಟಿರಬಹುದು; ಅದು ಅದರ ಸಂಬಂಧಗಳಿಗೆ ಪುನಃ ಸ್ಥಾಪಿಸಲ್ಪಟ್ಟಾಗ ಇನ್ನೂ ಹೆಚ್ಚಾಗಿರಬಹುದಲ್ಲವೇ! ಚಿತ್ರಕಲೆಯ ಉತ್ತಮ ಕೃತಿಯು ತುಂಡುತುಂಡುಗಳಾಗಿ ಕತ್ತರಿಸಲ್ಪಟ್ಟು ಭಾಗಭಾಗವಾಗಿ ನಮ್ಮ ಮೆಚ್ಚಿಕೆಗಾಗಿ ಕೊಡಲ್ಪಡುತ್ತದೆ ಎಂದು ಕಲ್ಪಿಸಿಕೊಳ್ಳಿರಿ; ಅಲ್ಲಿ ಗಿಡಗಂಟಿ, ಇಲ್ಲಿ ಒಂದು ಬಂಡೆ, ಮತ್ತು ಇನ್ನೊಂದು ತುಂಡಿನಲ್ಲಿ ನೀಲಿ ಆಕಾಶದ ಬಣ್ಣ, ಅಥವಾ ಕನ್ನಡಿಯಲ್ಲಿ ಕಾಣುವಂತೆ ಒಂದು ನೀರಿನ

ಮಡುವು! ಪ್ರತಿಯೊಂದಕ್ಕೆ ಅದರ ಸ್ವಂತ ಯೋಗ್ಯತೆ ಇದೆ, ಅದಾಗ್ಯೂ ಜನರು ಕಲೆಯ ಶ್ರೇಷ್ಠ ಸೃಷ್ಟಿಯನ್ನು ಹಾಗೆ ಅಧ್ಯಯನ ಮಾಡುವುದಿಲ್ಲ; ಹಾಗೆಯೇ ಅವರು ಆತ್ಮನ ಹೆಚ್ಚು ಶ್ರೇಷ್ಠವಾದ ಪ್ರಕಟನೆಗಳನ್ನು ಅಧ್ಯಯನ ಮಾಡಬಾರದು ಮಗ್ನಾ ಚಾರ್ಟ, ಲೂಥರಸ್ ಥೀಸಿಸ್ ಇಲ್ಲವೇ ಅಬ್ರಹಾಮ್ ಲಿಂಗನ್ಸ್‌ನ ಗುಣಲಕ್ಷಣ ಇವುಗಳು ತಮ್ಮಲ್ಲಿಯೇ ಸಂಶಯವಿಲ್ಲದೇ ಪರಿಶ್ರಮಶೀಲ ಅಧ್ಯಯನಕ್ಕೆ ಯೋಗ್ಯವಾದವುಗಳಾಗಿವೆ; ಚರಿತ್ರೆಯ ದೃಷ್ಟಿಕೋನದಿಂದ ನೋಡುವಾಗ, ಅವು *ಅತಿಶಯವಾದ* ಆಸಕ್ತಿಯುಳ್ಳವುಗಳಾಗಿವೆ ಅಬ್ರಹಾಮನನ್ನು ಇಲ್ಲವೇ ಮೋಶೆಯನ್ನು ಇಲ್ಲವೇ ದಾವೀದನನ್ನು ಇಲ್ಲವೇ ಪೌಲನನ್ನು ನೀವು ತಿಳಿಯಬೇಕಾಗಿದ್ದರೆ, ಅಬ್ರಹಾಮನ ಒಡಂಬಡಿಕೆಯನ್ನು ಸಿನಾಯಿ ಮತ್ತು ಕಲ್ವಾರಿಯ ಮೇಲಿನ ದೃಶ್ಯಗಳನ್ನು ಇಲ್ಲವೇ ಪಂಚಾಶತ್ತಮದ ದಿನದ ಪ್ರಸಂಗವನ್ನು ಗ್ರಹಿಸಿಕೊಳ್ಳಬೇಕಾದರೆ ಇಡೀ ಶ್ರೇಷ್ಠತೆಯ ಭಾಗಗಳಾಗಿ ನೀವು ತಿಳಿಯತಕ್ಕದ್ದು. ಬೈಬಲು ಐತಿಹಾಸಿಕವಾಗಿ ಅಧ್ಯಯನ ಮಾಡಲ್ಪಡತಕ್ಕದ್ದು.

**4. ಅದರ ಐಕ್ಯತೆಯನ್ನು ಗ್ರಹಿಸಿಕೊಳ್ಳಲಿಕ್ಕೆ.**-ಬೈಬಲು ಒಂದು ಪುಸ್ತಕವಾಗಿರುವುದಿಲ್ಲ; ಅದು ಅನೇಕ ಪುಸ್ತಕಗಳಾಗಿದೆ. ಅದರ ನಾಲ್ವತ್ತು ಜನ ಗ್ರಂಥಕರ್ತರು ಸ್ಥಳದ ದೂರದಿಂದಲೂ ಸಮಯದ ಅನೇಕ ಶತಮಾನಗಳ ಅಂತರದಿಂದಲೂ ಬೇರ್ಪಡಿಸಲ್ಪಟ್ಟಿದ್ದಾರೆ. ಕುರುಬರಿಂದ ಮತ್ತು ಬೆಸ್ತರಿಂದ ಹಿಡಿದುಕೊಂಡು ರಾಜ ಕವಿಗಳ ಮತ್ತು ತರಬೇತಿಹೊಂದಿದ ಪಂಡಿತರ ವರೆಗೆ ಸಂಸ್ಕೃತಿಯ ಪ್ರತಿಯೊಂದು ತರಗತಿಯವರಾಗಿದ್ದರು. ರಚನೆಯಲ್ಲಿಯೂ ಅಷ್ಟೇ ರೀತಿಯಲ್ಲಿ ವಿವಿಧತೆಯಿರುವುದು; ಚರಿತ್ರೆ, ನಿಯಮ, ಪದ್ಯ, ಪುರಾಣ ಮತ್ತು ಕೀರ್ತನೆ, ಜ್ಞಾನೋಕ್ತಿ, ಪ್ರವಾದನೆ, ಸಾಮ್ಯ ಭಾಷಣ, ಪತ್ರಿಕೆ, ಪ್ರಸಂಗ, ಎಲ್ಲವೂ ಈ ಅದ್ಭುತವಾದ ಪುಟಗಳಲ್ಲಿ ಸ್ಥಳವನ್ನು ಕಂಡುಕೊಂಡಿವೆ. ಹೀಗಿದ್ದರೂ ಈ ನಾಲ್ವತ್ತು ಜನ ಕರ್ತೃಗಳು ಒಬ್ಬರೊಬ್ಬರ ಕೃತಿಗಳ ಬಗ್ಗೆ ಅರುಹು ಇಲ್ಲದವರಾಗಿ ಕಾರ್ಯಮಾಡಿದ್ದಾರೆ.[2] ಆದಾಗ್ಯೂ, ಇದು ಒಂದು ಪುಸ್ತಕವಾಗಿದೆ. ನಿಜವಾದ, ಆದರೆ ಅರುಹು ಇಲ್ಲವೇ, ಆತ್ಮದ ಐಕ್ಯತೆ ಮತ್ತು ನಾಲ್ವತ್ತು ಗ್ರಂಥಕರ್ತರ ಉದ್ದೇಶವು ಸಾಧಿಸಲ್ಪಟ್ಟಿದೆ. ದೈವಿಕ ಉದ್ದೇಶದ ಹರಿಯದ ನೂಲು, ದೈವಿಕ ಯಜ್ಞದಿಂದ ಮಾನವ ವಿಮೋಚನೆಯ ಕಡುಗೆಂಪಾದ ನೂಲು, ಅರವತ್ತಾರು ಪುಸ್ತಕಗಳನ್ನು ಒಂದಾಗಿ ಕೂಡಿಸಿ ಅವುಗಳಲ್ಲಿ ಚಲಿಸುತ್ತದೆ. ಸ್ವಲ್ಪ ಸ್ವಲ್ಪವಾಗಿ, ಯುಗಯುಗದ ನಂತರ, ಆ ಉದ್ದೇಶವು ಪ್ರಕಟವಾಗುತ್ತದೆ: "ಮೊದಲು ಗುರಿ, ಆಮೇಲೆ ತೆನೆ, ಆಮೇಲೆ ತೆನೆಯಲ್ಲಿ ಪೂರ್ಣವಾಗಿ ಕಾಳು ಬೆಳೆಯುತ್ತದೆ." ಕ್ರಿಸ್ತನು ಚಿತ್ರದಲ್ಲಿ ನೋಟದ ಅಂಶವಾಗಿದ್ದಾನೆ. ಕಳೆದುಹೋದ ಪರದೈಸದಿಂದ ಮುಂದೆಯಾಗಲೀ, ಅಥವಾ ಪುನಃ ಹೊಂದಿಕೊಂಡ ಪರದೈಸದ ಹಿಂದೆಯಾಗಲೀ ಓಡುವ, ಒಂದುಗೂಡುವ ಗೆರಗಳು ಆತನ ತಲೆಯಮೇಲೆ ಬೀಳುತ್ತವೆ. ಕ್ರಿಸ್ತನು ಬೀಗದ ಕೈ ಆಗಿದ್ದಾನೆ; ಆತನಿಲ್ಲದೇ ಎಲ್ಲವೂ ಕ್ರಮವಿಲ್ಲದ್ದಾಗುತ್ತದೆ *chaos*; ಆತನೊಂದಿಗೆ ಎಲ್ಲವೂ *kosmos,* ಸೃಷ್ಟಿಯೂ ಸೌಂದರ್ಯವೂ, ಕ್ರಮವೂ, ಐಕ್ಯತೆಯೂ ಆಗಿರುತ್ತದೆ.

**5. ಮಾನವ ಚರಿತ್ರೆಯ ಒಂದು ಪುಸ್ತಕದಂತೆ.**-ತನ್ನ ಸ್ವಂತದ ರೀತಿಯ ಚರಿತ್ರೆಯ ಬಗ್ಗೆ ಅಜ್ಞಾನಿಯಾಗಿರುವವನು ಯಾವನೂ ವಿಶಾಲವಾದ ಸಂಸ್ಕೃತಿಯನ್ನು ಕೇಳಲಾರನು. ವೈಯಕ್ತಿಕ ಸಾಹಸದ ಇಲ್ಲವೇ ಹುಚ್ಚುತನದ ಅತೀ ಶ್ರೇಷ್ಠವಾದ ಪಾಠಗಳು, ಎಲ್ಲಾ ಸಮಯಗಳ ವಿಪುಲ ಸಾಹಿತ್ಯಗಳು ಚರಿತ್ರೆಯಲ್ಲಿ ತುಂಬಿ ಹೋಗಿರುತ್ತವೆ. ಭೂಲೋಕದ ಅತೀ ಗಮನಾರ್ಹವಾದ ಜನಾಂಗಗಳಲ್ಲಿ ಒಂದಾದ ಇಬ್ರೀಮರ ಮೂಲವನ್ನು ಮತ್ತು ಅದೃಷ್ಟಗಳ ಗಮನಾರ್ಹವಾದ ಪೂರ್ಣತೆಯೊಂದಿಗೆ ಬೈಬಲು ಶೋಧಿಸುತ್ತದೆ. *ಅವರ* ಚರಿತ್ರೆಯ ನೂಲು ಪುರಾತನ ಕಾಲದ ಪ್ರತಿಯೊಂದು ದೊಡ್ಡ ಜನಾಂಗದ ಅದೃಷ್ಟ ಗಳೊಂದಿಗೆ ನೇಮಿಸಲ್ಪಟ್ಟಿದೆ, ಹೀಗೆ ಕಲ್ದಿಯ, ಐಗುಪ್ತ, ಅಸ್ಸೀರಿಯ, ಬಬಿಲೋನಿಯ,

ಪರ್ಷಿಯ, ಮಕೆದೋನಿಯ ಮತ್ತು ರೋಮ್ ಇವೆಲ್ಲವುಗಳು ಸಂಪರ್ಕದಲ್ಲಿವೆ.

**6. ಬೈಬಲಿನಲ್ಲಿ ಒಬ್ಬನ ವಿಶ್ವಾಸವನ್ನು ಕಾಪಾಡಿಕೊಳ್ಳುವುದು.**-ಸಾವಿರಾರು ಬಾಲಿಶ ಭಾವದ ಭಾವನೆಗಳನ್ನು ಮೀರಿ ಬೆಳೆಯುತ್ತೇವೆ. ವರ್ಷಗಳ ಅನುಪಸ್ಥಿತಿಯ ನಂತರ ನಾವು ನಮ್ಮ ಬಾಲ್ಯದ ಮನೆಗೆ ಹಿಂದಿರುಗಿ ಬರುತ್ತೇವೆ. ಪ್ರತಿಯೊಂದು ಹೇಗೆ ಬದಲಾಗಿರುತ್ತದೆ! ಹಳೇ ಮನೆ ಮತ್ತು ಉಗ್ರಾಣ, ನಾವು ಆಟವಾಡಿದ ಇಲ್ಲವೇ ಶ್ರಮೆ ಪಟ್ಟ ಹೊಲಗಳು, ನಾವು ಹತ್ತಿ ಇಳಿದ ದಿನ್ನೆಗಳು, ನಾವು ಸ್ನಾನ ಮಾಡಿದ ಇಲ್ಲವೇ ಮೀನು ಹಿಡಿದ ಇಲ್ಲವೇ ಚಲ್ಲಾಟವಾಡಿದ ಹಳ್ಳ ಎಲ್ಲವೂ ಬದಲಾಗಿ ಹೋಗಿದೆ. ಹೊರಗೆ ಮತ್ತು ಒಳಗೆ ನಮ್ಮ ಜೀವಿತವು ವಿಶಾಲವಾಗಿದೆ. ಬಾಲ್ಯದ ಇತರ ವಿಚಾರಗಳೊಂದಿಗೆ ನಮ್ಮ ತಂದೆಯ ಬೈಬಲಿನಲ್ಲಿ ನಮ್ಮ ವಿಶ್ವಾಸವನ್ನು ಕಳೆದುಕೊಳ್ಳುತ್ತೇವೆಯೋ ಎಂಬ ಗಂಡಾಂತರವಿದೆ. ಅದರ ಬಗ್ಗೆ ನಮ್ಮ ನಿಜವಾದ ಅಜ್ಞಾನದಲ್ಲಿ ನಮ್ಮ ಗಂಡಾಂತರವಿರುತ್ತದೆ; ಪರಿಹಾರವು ಹೆಚ್ಚು ಉತ್ತಮವಾದ, ಹೆಚ್ಚು ಕ್ರೋಢಿಕೃತ ಜ್ಞಾನದಲ್ಲಿ ಇರುತ್ತದೆ.

## II. ಬೈಬಲ್ ಚರಿತ್ರೆಯ ಉದ್ದೇಶ

ಪ್ರಾಥಮಿಕ ಉದ್ದೇಶವು ಧಾರ್ಮಿಕವಾದದ್ದಾಗಿದೆ. ಎಲ್ಲಾ ಚರಿತ್ರೆಯಲ್ಲಿ ಧರ್ಮದ ಮಹತ್ವದ್ದಾಗಿದೆ. ಅದು ಕಲೆ, ಪದ್ಯ, ಕಾನೂನು, ಆಚಾರಗಳು, ಕುಟುಂಬ ಜೀವನ, ಬಹಳ ಸಲ ದೊಡ್ಡ ಯುದ್ಧಗಳೊಂದಿಗೆ ಮಿಳಿತವಾಗಿರುತ್ತದೆ. ಇನ್ನೂ, ಅದು ನಿಯಮದಂತೆ, ಆಕಸ್ಮಿಕವಾದದ್ದೂ, ದ್ವೈತೀಯವಾದದ್ದೂ ಎಂದು ಎಣಿಸಲ್ಪಟ್ಟಿದೆ. ರಾಜಕೀಯ ಮತ್ತು ಬೌದ್ಧಿಕ ಜೀವನ, ಮಹಾಸಾಮ್ರಾಜ್ಯಗಳ ಇಲ್ಲವೇ ಅತ್ಯುತ್ತಮವಾದ ಶಿಲ್ಪ ಕಲೆಯ ಸ್ಮಾರಕಗಳ ಕಟ್ಟುವಿಕೆಯು, ಕಲೆಯ ಇಲ್ಲವೇ ಕಾನೂನಿನ ಇಲ್ಲವೇ ಸಾಹಿತ್ಯದ ಚಮತ್ಕಾರದ ಸೃಷ್ಟಿ - ಇವು ಮೊದಲನೆಯ ಸ್ಥಾನವನ್ನು ಹಿಡಿದುಕೊಳ್ಳುತ್ತವೆ.

ಬೈಬಲ್ ಚರಿತ್ರೆಯಲ್ಲಿ, ಇದಕ್ಕೆ ವಿರುದ್ಧವಾಗಿ, ಧಾರ್ಮಿಕ ಉದ್ದೇಶವು ಪ್ರಬಲವಾಗಿರುತ್ತದೆ. ನಿಜವಾಗಿಯೂ, ಅವುಗಳ ಅದ್ಭುತ ಕಥೆಯ ಮೊದಲಿನಿಂದ ಕಡೆಯವರೆಗೆ, ದೇವರು ಆಯ್ದುಕೊಂಡ ಜನಾಂಗವು ಹಳೆಯ ಪ್ರತಿಯೊಂದು ದೊಡ್ಡ ಜನಾಂಗದೊಂದಿಗೆ ಸಂಪರ್ಕದಲ್ಲಿ ಬಂದಿತು. *ಅವು* ಬಲಕ್ಕೆ ಮೇಲಕ್ಕೆದ್ದುದರಲ್ಲಿಯ ಹಂತಗಳ ಬಗ್ಗೆ ಕೆಲವೊಂದನ್ನು ನಾವು ಕಲಿತುಕೊಳ್ಳುತ್ತೇವೆ, ಮತ್ತು ಅವುಗಳ ಅವನತಿಯ ಕಾರಣಗಳನ್ನು ತಿಳಿದುಕೊಳ್ಳುತ್ತೇವೆ. ಇನ್ನೂ, ಬೈಬಲಿನಲ್ಲಿ ಸಾಮಾನ್ಯ ಚರಿತ್ರೆಯ ಪ್ರಸಂಗಿಕವಾದದ್ದಾಗಿದೆ. *ಪ್ರಾಥಮಿಕ ಉದ್ದೇಶವು,* ಪಿತೃಗಳ, ಯೆಹೂದ್ಯರ ಮತ್ತು ಕ್ರೈಸ್ತರ - ಈ ಮೂರು ದೊಡ್ಡ ಹಂತಗಳಲ್ಲಿ ನಿಜವಾದ ಧರ್ಮದ ಐತಿಹಾಸಿಕ ಮೂಲ ಮತ್ತು ಬೆಳವಣಿಗೆಯನ್ನು ಗುರುತಿಸುವುದಾಗಿದೆ. ಒಂದು ದೊಡ್ಡ ಐತಿಹಾಸಿಕ ಧರ್ಮವನ್ನು ಒಬ್ಬ ಮನುಷ್ಯನು ನಂಬದಿದ್ದರೂ, ಅವನು ಅದರ ಒಂದು ಬುದ್ಧಿವಂತಿಕೆಯ ತತ್ವವಿಲ್ಲದೆ ಇರಲಾರನು.

## III. ಬೈಬಲ್ ಚರಿತ್ರೆಯ ಯುಗಗಳು

ಮೂರು ದೊಡ್ಡ ಯುಗಗಳಲ್ಲಿ ಇಲ್ಲವೇ ಕಾಲಾವಧಿಗಳಲ್ಲಿ ಮೂರು ಪ್ರಮುಖ ಘಟನೆಗಳು ಬೈಬಲ್ ಚರಿತ್ರೆಯನ್ನು ಗುರುತಿಸುತ್ತದೆ. ಅವು: (1) ಸಿನಾಯಿ ಬೆಟ್ಟದ ಮೇಲೆ ಮೋಶೆಯ ಧರ್ಮಶಾಸ್ತ್ರವು ಕೊಡಲ್ಪಟ್ಟದ್ದು; (2) ಪಂಚಾಶತ್ತಮ ದಿನದಂದು ಪರಿಶುದ್ಧಾತ್ಮನು ಬಂದದ್ದು; (3) ಕೊನೆಯ ಅಪೊಸ್ತಲನ ಮರಣ. ಯುಗಗಳನ್ನು ಹೀಗೆ ನಿರೂಪಿಸಬಹುದು:

1. ಪಿತೃಗಳ ಯುಗ,[3] ಕ್ರಿ.ಪೂ. 4004-1491. ಸೃಷ್ಟಿಯಿಂದ ಧರ್ಮಶಾಸ್ತ್ರ ಕೊಡಲ್ಪಡುವವರೆಗೆ.

2. ಯೆಹೂದಿ ಯುಗ, ಕ್ರಿ.ಪೂ. 1491-ಕ್ರಿ.ಶ. 30. ಧರ್ಮಶಾಸ್ತ್ರವು ಕೊಡಲ್ಪಟ್ಟಂದಿನಿಂದ ಪರಿಶುದ್ಧಾತ್ಮನು ಇಳಿದು ಬರುವವರೆಗೆ.

3. ಕ್ರೈಸ್ತ ಯುಗ, ಕ್ರಿ.ಶ. 30-100. ಪರಿಶುದ್ಧಾತ್ಮನು ಇಳಿದು ಬಂದಂದಿನಿಂದ ಅಪೊಸ್ತಲ ಯೋಹಾನನ ಮರಣದವರೆಗೆ.

ಮೊದಲನೆಯದರ ವಿಶೇಷ ಗುಣಲಕ್ಷಣವು ಕುಟುಂಬವಾಗಿದೆ - ಕುಟುಂಬದ ಪ್ರಕಟನೆ, ಕುಟುಂಬ ಧರ್ಮ, ಕುಟುಂಬ ಆಡಳಿತೆ; ಎರಡನೆಯದ್ದರದು ಜನಾಂಗ - ಜನಾಂಗಿಕ ಧರ್ಮ, ಒಂದು ಜನಾಂಗಿಕ ಒಡಂಬಡಿಕೆ; ಮೂರನೆಯದ್ದರದು, - ವಿಶ್ವವಿಶಾಲವಾದ ಧರ್ಮ ಮತ್ತು ಸಂದೇಶ, ಮೊದನೆಯದಲ್ಲಿ ದೇವರು ಪಿತೃಗಳ ಮುಖಾಂತರ ಕುಟುಂಬಗಳಿಗೆ ಮಾತಾಡಿದನು; ಎರಡನೆಯದರಲ್ಲಿ, ಮೋಶೆಯ ಮುಖಾಂತರ ಜನಾಂಗಕ್ಕೆ; ಮೂರನೆಯದರಲ್ಲಿ, ತನ್ನ ಕುಮಾರನ ಮುಖಾಂತರ ಆತನು ಇಡೀ ಜಗತ್ತಿನೊಂದಿಗೆ ಮಾತಾಡುತ್ತಾನೆ.

## IV. ಹಳೇ ಒಡಂಬಡಿಕೆಯ ಚರಿತ್ರೆಯ ಕಾಲಾವಧಿಗಳು

ಇತಿಹಾಸದ ಘಟನೆಗಳನ್ನು ಯೋಗ್ಯವಾದ ದೃಷ್ಟಿಕೋನದಲ್ಲಿ ತೆಗೆದುಕೊಳ್ಳ ಬೇಕಾದರೆ, ಚರಿತ್ರೆಯ ಕೆಲವು *ಆಧಾರಗಳನ್ನು* ಮತ್ತು ಅವುಗಳ ದಿನಾಂಕಗಳನ್ನು ಸ್ಥಿರವಾಗಿ ನಿರ್ಧರಿಸತಕ್ಕದ್ದು. ಪ್ರತಿಯೊಂದು ಘಟನೆಯನ್ನು ಅದರ ಯೋಗ್ಯ ಅವಧಿಗೆ ಯಾವಾಗಲೂ ಉಲ್ಲೇಖಿಸುವ ರೂಡಿಸುವಿಕೆಯೊಂದಿಗೆ ಕೆಳಗಿನ ಅವಧಿಗಳಲ್ಲಿ ಪ್ರವೀಣತೆ ಹೊಂದುವಲ್ಲಿ ಕಳೆದ ಒಂದು ತಾಸು, ಜೀವನಾವಧಿ ಸೇವೆಯನ್ನು ಸಿದ್ಧಪಡಿಸುವುದು:

1. ಜಲಪ್ರಳಯಕ್ಕಿಂತ ಮೊದಲಿನ ಕಾಲಾವಧಿ, ಕ್ರಿ.ಪೂ. 4004-2348. ಸೃಷ್ಟಿಯಿಂದ ಜಲಪ್ರಳಯದವರೆಗೆ.
2. ಜಲಪ್ರಳಯದ ನಂತರದ ಕಾಲಾವಧಿ, ಕ್ರಿ.ಪೂ. 2348-1921. ಜಲಪ್ರಳಯದಿಂದ ಅಬ್ರಹಾಮನ ಕರೆಯುವಿಕೆಯವರೆಗೆ.
3. ಪಿತೃಗಳ ಕಾಲಾವಧಿ, ಕ್ರಿ.ಪೂ. 1921-1706. ಅಬ್ರಹಾಮನ ಕರೆಯುವಿಕೆಯಿಂದ ಐಗುಪ್ತಕ್ಕೆ ವಲಸೆ ಹೋಗುವವರೆಗೆ.
4. ದಾಸ್ಯದ ಕಾಲಾವಧಿ, ಕ್ರಿ.ಪೂ. 1706-1491. ಐಗುಪ್ತ್ಯಕ್ಕೆ ವಲಸೆ ಹೋದಂದಿನಿಂದ ಹೊರಡೋಣದವರೆಗೆ.
5. ಅಲೆದಾಟಗಳು, ಕ್ರಿ.ಪೂ. 1491-1451. ಹೊರಡೋಣದಿಂದ ಯೊರ್ದನ್ ದಾಟುವವರೆಗೆ.
6. ವಿಜಯದ ಕಾಲಾವಧಿ. ಕ್ರಿ.ಪೂ. 1451-1400. ಯೊರ್ದನ್‌ನ್ನು ದಾಟಿದಂದಿನಿಂದ ಯೆಹೋಶುವನ ಮರಣದವೆರೆಗೆ.
7. ನ್ಯಾಯಸ್ಥಾಪಕರು, ಕ್ರಿ.ಪೂ. 1400-1095. ಯೆಹೋಶುವನ ಮರಣದಿಂದ ಸೌಲನ ಅಭಿಷೇಕದವರೆಗೆ.
8. ಸಂಯುಕ್ತ ರಾಜ್ಯ, ಕ್ರಿ.ಪೂ. 1095-975. ಸೌಲನ ಅಭಿಷೇಕದಿಂದ ರೆಹೊಬ್ಬಾಮನ ಸಿಂಹಾಸನಾರೋಹಣದವರೆಗೆ.
9. ಎರಡು ರಾಜ್ಯಗಳು, ಕ್ರಿ.ಪೂ. 975-722. ರೆಹೊಬ್ಬಾಮನ ಸಿಂಹಾಸನಾರೋಹಣದಿಂದ ಸಮಾರ್ಯದ ಪತನದವರೆಗೆ.
10. ಯೂದಯ ಮಾತ್ರವೇ, ಕ್ರಿ.ಪೂ. 722-586. ಸಮಾರ್ಯದ ಪತನದಿಂದ ಯೆರೂಸಲೇಮಿನ ಪತನದವರೆಗೆ.

11. ಸೆರೆಯವಾಸ, ಕ್ರಿ.ಪೂ. 586-536. ಯೆರೂಸಲೇಮಿನ ಪತನದಿಂದ ಜೆರುಬ್ಬಾಬೇಲನ ಅಧೀನತೆಯಲ್ಲಿ ಹಿಂದಿರುಗುವವರೆಗೆ.
12. ಸೆರೆಯ ನಂತರದ ಕಾಲಾವಧಿ, ಕ್ರಿ.ಪೂ. 536-400. ಹಿಂದಿರುಗುವಿಕೆಯಿಂದ ಹಳೇ ಒಡಂಬಡಿಕೆಯ ಗ್ರಂಥದ ಮುಕ್ತಾಯದವರೆಗೆ.

---

ಟಿಪ್ಪಣಿಗಳು

[1]ಸಂಖ್ಯೆಯು 1921ರಲ್ಲಿಯ ಭಾಷಾಂತರದ ಪ್ರಗತಿಯನ್ನು ಪ್ರತಿಬಿಂಬಿಸುತ್ತದೆ. [2]ಡೀನ್ ಅವರು "wrought" (ಹದಮಾಡಿದ್ದಾರೆ) ಎಂದಿದ್ದಾರೆ. [3]ಪುರಾತನ ಬೈಬಲ್ ಕಾಲಗಣನೆಯು ಬಹಳ ಅನಿಶ್ಚಿತವಾದದ್ದಾಗಿದೆ. ಯಾವುದೇ ಸ್ವೀಕೃತ ಪದ್ಧತಿಯ ಕೊರತೆಯಿಂದ, ಅಶ್ಶರನ ಪದ್ಧತಿಯು, ನಮ್ಮ ಬೈಬಲುಗಳ ಮಾರ್ಜಿನುಗಳಲ್ಲಿ ಟಿಪ್ಪಣಿ ಮಾಡಿದಂತೆ, ಇಲ್ಲಿ ಕೊಡಲ್ಪಟ್ಟಿದೆ. ಹೊರಡೋಣವು ಬಹುಶಃ ಒಂದು ನೂರರಿಂದ ಒಂದು ನೂರ ಐವತ್ತು ವರ್ಷಗಳ ನಂತರ ಬರುತ್ತದೆ.

© 2009 Truth for Today